## ನಿವೇದನೆ

# ಶಿಕ್ಷಣದ ಹಕ್ಕು

ಆರ್‌ಟಿಇ ಕಾಯಿದೆಯ ಅನುಷ್ಠಾನ ಆರಂಭವಾಗಿರುವ ಮೊದಲ ವರ್ಷ ಇದು. ಹೀಗಾಗಿ ಹಲವು ನೆಲೆಗಳಲ್ಲಿ ಗೊಂದಲ, ವಾದ ವಿವಾದಗಳೂ ಸೃಷ್ಟಿಯಾಗಿವೆ.

ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಜಾರಿ ಮಾಡುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ನೆರೆಹೊರೆಯ ಖಾಸಗಿ ಶಾಲೆಗಳು, ಶೇಕಡ 25ರಷ್ಟು ಸೀಟುಗಳನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತವಾಗಿ ನೀಡಬೇಕಾದುದು ಈ ಕಾಯಿದೆ ಪ್ರಕಾರ ಕಡ್ಡಾಯವಾಗಿದೆ. ಈ ಬಡಮಕ್ಕಳ ಶಾಲಾ ಶುಲ್ಕಗಳನ್ನು ಸರ್ಕಾರ ಪಾವತಿಸಲಿದ್ದು ಇದಕ್ಕೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ರಾಜ್ಯಸರ್ಕಾರ ಪ್ರಕಟಿಸಿದೆ. ಈ ಪ್ರಕಾರ, ಈ ಕಾಯಿದೆಯ ಅನುಷ್ಠಾನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಹತ್ವದ ಪಾತ್ರ ವಹಿಸಲಾಗಿದೆ. ಆರ್‌ಟಿಇ ಕಾಯಿದೆಯ ಶೇಕಡ 25ರಷ್ಟು ಮೀಸಲಿನ ಅನ್ವಯ, ರಾಜ್ಯದಾದ್ಯಂತ ಈ ವರ್ಷ 91,000 ಸೀಟುಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಲಭ್ಯವಾಗಲಿವೆ ಎಂಬುದು ಸಾರ್ವಜನಿಕ ಶಿಕ್ಷಣ ಇಲಾಖೆಯ ಹೇಳಿಕೆ.

ಆರ್‌ಟಿಇ ಕಾಯಿದೆಯ ಅನುಷ್ಠಾನ ಆರಂಭವಾಗಿರುವ ಮೊದಲ ವರ್ಷ ಇದು. ಹೀಗಾಗಿ ಹಲವು ನೆಲೆಗಳಲ್ಲಿ ಗೊಂದಲ, ವಾದ ವಿವಾದಗಳೂ ಸೃಷ್ಟಿಯಾಗಿವೆ. '2009ರ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ'– ಮೊದಲ ತರಗತಿಯಿಂದ ಮಾತ್ರವಲ್ಲ, ಪ್ರಾಥಮಿಕ ಪೂರ್ವಹಂತದಿಂದಲೇ ಅನ್ವಯವಾಗುತ್ತದೆ ಎಂಬುದು ರಾಜ್ಯ ಸರ್ಕಾರದ ನಿಲುವು. ಆದರೆ ಮಗುವಿನ ಆರನೇ ವಯಸ್ಸಿನಿಂದ ಮಾತ್ರ ಆರ್‌ಟಿಇ ಕಾಯಿದೆ ಅನ್ವಯವಾಗುತ್ತದೆ ಎಂಬ ವಾದವನ್ನು ಕೆಲವು ಶಾಲಾ ಆಡಳಿತ ಮಂಡಳಿಗಳು ಮಂಡಿಸಿವೆ. 6 ರಿಂದ 14 ವರ್ಷದ ಮಕ್ಕಳ ಗುಂಪನ್ನು ನಿರ್ದಿಷ್ಟವಾಗಿ ಆರ್‌ಟಿಇ ಕಾಯಿದೆ ಹೆಸರಿಸಿರುವುದಿಂದ ಇದು ಒಂದು ವಿವಾದದ ಕೇಂದ್ರಬಿಂದುವಾಗಿದೆ. ಆದರೆ ಆರ್‌ಟಿಇ ವಾಸ್ತವವಾಗಿ ಜಾರಿಯಾಗಿರಬೇಕಿರುವುದು 'ಪ್ರವೇಶ ಮಟ್ಟ'ದಲ್ಲಿ. ಹೀಗಾಗಿಯೇ ಪೂರ್ವ ಪ್ರಾಥಮಿಕ ಹಂತದಲ್ಲೇ ಕಾಯಿದೆಯ ಅನುಷ್ಠಾನ ತಾರ್ಕಿಕವಾದದ್ದು ಎಂಬ ವಾದವನ್ನು ರಾಜ್ಯದ ಅಧಿಕಾರಿಗಳು ಮುಂದಿಟ್ಟಿದ್ದಾರೆ. ಇದಕ್ಕೆ ಪೂರಕವಾಗಿ, ಈ ವರ್ಷಕ್ಕೆ ಪ್ರತಿ ಮಗುವಿಗೆ ವಾರ್ಷಿಕ 11,848 ರೂಪಾಯಿಗಳ ವೆಚ್ಚದ ಮಿತಿಯನ್ನು ಸರ್ಕಾರ ನಿಗದಿಪಡಿಸಿದೆ. ಪೂರ್ವ ಪ್ರಾಥಮಿಕ ಹಂತದ ಮಕ್ಕಳಿಗೆ ವಾರ್ಷಿಕ ತಲಾ 5924 ರೂಪಾಯಿಗಳನ್ನು ಶುಲ್ಕ ಭರಿಸಲು ನೀಡುವುದಾಗಿ ಸರ್ಕಾರ ಹೇಳಿದೆ. ಇದೂ ಕೂಡ ವಿವಾದಾಸ್ಪದವಾಗಿದೆ. ಏಕೆಂದರೆ, ಅನೇಕ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿ ಮಗುವಿನ ವೆಚ್ಚ ಈ ಮಿತಿಯನ್ನು ಮೀರಿರುವಂತಹದ್ದು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಹೀಗಾಗಿ ಇತರ ವಿದ್ಯಾರ್ಥಿಗಳಿಗೆ ಶುಲ್ಕ ಹೆಚ್ಚಿಸಲು ಇದೊಂದು ನೆಪವಾಗಬಹುದು. ಈ ಇಂಗಿತವನ್ನು ಅನೇಕ ಶಾಲಾ ಆಡಳಿತ ಮಂಡಳಿಗಳು ಈಗಾಗಲೇ ವ್ಯಕ್ತಪಡಿಸಿಯೂ ಆಗಿದೆ. ಆದರೆ ಈ ನಷ್ಟ ಭರ್ತಿಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್)ಯೋಜನೆ ಅಡಿ ಬೆಂಬಲ ಪಡೆದುಕೊಳ್ಳಬಹುದಾದ ಸಲಹೆಯನ್ನು ಕೇಂದ್ರ ಸಚಿವ ಕಪಿಲ್ ಸಿಬಲ್ ನೀಡಿದ್ದಾರೆ. ಈ ಎಲ್ಲಾ ನೆಲೆಗಳಲ್ಲಿ ಹಲವು ಬಗೆಯ ಅವ್ಯವಹಾರಗಳಿಗೆ ಅವಕಾಶಗಳಾಗುವ ಸಾಧ್ಯತೆಗಳ ಬಗೆಗೂ ಭೀತಿ ವ್ಯಕ್ತಪಡಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರಲ್ಲಿ ರಾಜಕಾರಣಿಗಳೂ ಸೇರಿದ್ದಾರೆ. ಶಿಕ್ಷಣ ಹಕ್ಕು ಕಾಯಿದೆ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ದುರ್ಬಳಕೆಯ ಮತ್ತೊಂದು ಸಾಧನವಾಗದಂತೆ ಎಚ್ಚರಿಕೆ ಅಗತ್ಯ.

ಖಾಸಗಿ ಶಾಲೆಗಳಲ್ಲಿ ಶ್ರೀಮಂತರು ಹಾಗೂ ಬಡಮಕ್ಕಳು ಒಟ್ಟೊಟ್ಟಿಗೆ ಕಲಿಯುವುದು ಸದ್ಯದ ಸ್ಥಿತಿಯಲ್ಲಿ ಕ್ರಾಂತಿಕಾರಕ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಹಲವು ದಶಕಗಳ ಹಿಂದೆ ಖಾಸಗಿ ಶಾಲೆಗಳ ಹಾವಳಿ ಇರದಿದ್ದಾಗ ಈ ವ್ಯವಸ್ಥೆ ನಮ್ಮ ಸಮಾಜದೊಳಗೆ ಅಂತರ್ಗತವಾಗಿಯೇ ಇತ್ತು. ಗುರುಕುಲದಲ್ಲಿ ಸಹಪಾಠಿಗಳಾಗಿದ್ದ ಕೃಷ್ಣ– ಕುಚೇಲರ ಆದರ್ಶ ಸ್ನೇಹದ ಪರಂಪರೆಯೇ ನಮ್ಮ ಬೆನ್ನಿಗಿದೆ. ಆದರೆ ಜಾಗತೀಕರಣದ ನಂತರದ ಕಾಲದಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ಅಂತರ ಹೆಚ್ಚಾದಂತೆ ಸರ್ಕಾರಿ ಶಾಲೆಗಳು ಬಡಮಕ್ಕಳ ಶಾಲೆಗಳಾದವು. ಖಾಸಗಿ ಶಾಲೆಗಳು ಪ್ರತಿಷ್ಠಿತರ ಮಕ್ಕಳ ಶಾಲೆಗಳಾಗಿ ಪರಿವರ್ತಿತವಾದವು. ಹೀಗಾಗಿಯೇ ಈಗ ಸಿಬಿಎಸ್‌ಇ, ಐಸಿಎಸ್‌ಇ ಅಥವಾ ಇಂಟರ್‌ನ್ಯಾಷನಲ್ ಶಾಲೆಗಳಿಗೆ ಸೇರಬೇಕೆಂಬ ಬಡಮಕ್ಕಳ ಕನಸುಗಳಿಗೆ 'ಆರ್‌ಟಿಇ' ಬಣ್ಣ ತುಂಬಿದೆ. ಇದರ ಯಶಸ್ವಿ ಅನುಷ್ಠಾನದಲ್ಲಿ ಸರ್ಕಾರ ಹಾಗೂ ಸಮಾಜದ ಹೊಣೆಗಾರಿಕೆ ಮುಖ್ಯವಾದುದು. ಶಿಕ್ಷಣದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವ (ಪಿಪಿಪಿ)ದ ಮಾದರಿ ವಿಸ್ತರಣೆಗೆ ಇದೊಂದು ಅವಕಾಶ. ಜೊತೆಗೆ, ಖಾಸಗಿ ಶಾಲೆಗಳಿಗೆ ಸಮನಾಗಿ ಸರ್ಕಾರಿ ಶಾಲೆಗಳಿಗೂ ಬಲ ತುಂಬಬೇಕಾದ ಹೊಣೆಗಾರಿಕೆಯಿಂದಲೂ ಸರ್ಕಾರ ನುಣುಚಿಕೊಳ್ಳುವುದು ಸಲ್ಲದು.

■ ಸಿ.ಜಿ.ಮಂಜುಳಾ


ಗಣೇಶ ಆರ್ ಹರಳೀಕಟ್ಟೆ